ಸಿ. ಸಿ. ನಂ: 92/2021 ಪಿಡಬ್ಲ್ಯೂ: 1

ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 27.02.2024

**ಮುಂದುವರೆದ ಪಾಟೀ ಸವಾಲು : ಆರೋಪಿ ಪರ ಶ್ರೀ ಹೆಚ್. ಎಸ್.ಜೆ. ವಕೀಲರಿಂದಃ**

ನಿಪಿ-5 ರಲ್ಲಿನ ಸಹಿಯು ಆರೋಪಿತನದು ಇರುತ್ತದೆ. ನಿಪಿ-1 ರ ಮೇಲಿನ ಸಹಿಯೂ ಸಹ ಆರೋಪಿತನದು ಇರುತ್ತದೆ. ನಿಪಿ-1 ಮತ್ತು ನಿಪಿ-5 ರಲ್ಲಿಯ ಸಹಿಗಳಿಗೆ ವ್ಯತ್ಯಾಸ ಇರುತ್ತದೆ. ಸಾಧಿಕ ಕಾಗಿನೆಲೆ ಇವರ ತಂದೆ ಮೆಣಸಿನಕಾಯಿ ಕಾರದಪುಡಿ ವ್ಯಾಪಾರ ಮಾಡುತ್ತಾರೆ. ಸಾಧಿಕ ಕಾಗಿನೆಲೆ ಇವರ ತಂದೆ ಮೊದಲು ಕೆ. ಇ. ಬಿ. ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ಸಾಧಿಕ ಕಾಗಿನೆಲೆ ಇವರ ತಂದೆಯ ಕಡೆ ಕೊಟ್ಟ ಚೆಕ್ಕು ಎಂದರೆ ಗೊತ್ತಿಲ್ಲ. ನಿಪಿ-1 ರ ಮೇಲೆ ಆರೋಪಿ ಸಹಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಸಾಧಿಕ ಕಾಗಿನೆಲೆ ಇವರ ತಂದೆಯ ಕಡೆಯಿಂದ ನಿಪಿ-1 ನ್ನು ಪಡೆದುಕೊಂಡು ಆತನ ಜೊತೆ ಕಮಿಷನ್ ವ್ಯವಹಾರ ಮಾತನಾಡಿಕೊಂಡು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿತನಿಗೂ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಅಂಚೆ ಇಲಾಖೆಯವರ ಜೊತೆ ಮಿಲಾಪಿಯಾಗಿ ಆರೋಪಿತನಿಗೆ ನೋಟೀಸು ಜಾರಿಯಾಗಿದೆ ಅಂತಾ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿತನಿಗೂ ಯಾವುದೇ ಹಣಕಾಸಿನ ವ್ಯವಹಾರ ಇಲ್ಲದಿದ್ದರೂ ಸಹ ಬೇರೆಯವರ ಕಡೆಯಿಂದ ನಿಪಿ-1 ನ್ನು ಪಡೆದುಕೊಂಡು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.